ಎಲ್ಲಿಂದಲೋ ಬಂದಿತು ಒಂದು ಮಿಂಚು... ''ಛಳಾರ್...'' ಅದರ ಬೆನ್ನ ಹಿಂದೆಯೇ ಕಿವಿಯೆಲ್ಲಾ ತೂತು ಬೀಳುವಂಥ ಸಿಡಿಲು.

"ಈ ಆಷಾಢದಲ್ಲಿ ಸಿಡಿಲು!" ರವಿ ಆಶ್ಚರ್ಯಗೊಂಡ. ದೂರದಲ್ಲಿ ಅಸ್ಪಷ್ಟವಾಗಿ ಕಾಣುತ್ತಿದ್ದ ಮಾಳ್ಯಾದ ಬೆಳಕು ಮಾಯಾವಾಯಿತು.

"ಇನ್ನೇನು ಮಳೆ ಬರಬಹುದು... ಬನ್ನಿ ಬೇಗ ಆ ಊರಾದರೂ ಸೇರೋಣ."

"ನನಗೆ ಆಗುತ್ತಿಲ್ಲ... ಬಿದ್ದಿದ್ದಕ್ಕೆ ಕಾಲು ಪೆಟ್ಟಾಗಿರಬೇಕು... ನೀವು ಹೋಗಿ" ಅಲ್ಲೆಲ್ಲೋ ಸಣ್ಣ ಮಿಣುಕು ಹುಳದಂತೆ ದೀಪಗಳು ತನ್ನತ್ತಲೇ ಬರುತ್ತಿರುವ ಹಾಗೆ ಕಾಣಿಸಿತು ರವಿಗೆ. ನಿಧಾನವಾಗಿ ಆ ದೀಪಗಳ ಪ್ರಖರತೆ ಹೆಚ್ಚಾಯಿತು. ಅದರೊಂದಿಗೇ ಒಂದು ತೆರನಾದ ಸಂಗೀತ... ಉತ್ತರ ಭಾರತದ ಕಡೆ ಬಾರಿಸುವಂಥ ಧೋಲಕ್‌ನ ಶಬ್ದ. ರವಿ ಆಶ್ಚರ್ಯದಿಂದ ಆ ದೀಪಗಳ ಕಡೆಗೇ ನೋಡತೊಡಗಿದ. ಆ ಚಿಕ್ಕ ಚಿಕ್ಕ ದೀಪಗಳ ನಡುವೆ ಒಂದು ದೊಡ್ಡ ದೀಪ ಅವನೆಡೆಗೇ ಬರುತ್ತಿರುವಂತೆ ಕಂಡಿತು. ನಿಧಾನವಾಗಿ ಹತ್ತಿರ ಬರುತ್ತಿರುವ ಆ ದೀಪಗಳೊಂದಿಗೆ ಮೇಳೈಸಿದಂತೆ ಆ ಧೋಲಕ್‌ನ ಸದ್ದು. ವಿಚಿತ್ರವಾದರೂ ಕೇಳಲು ಒಂದು ರೀತಿಯ ಖುಷಿ ಆಗುವಂತಿತ್ತು. ಆ ದೀಪಗಳು ಹತ್ತಿರ ಹತ್ತಿರ ಬರುತ್ತಿದ್ದಂತೆಯೇ ರವಿಗೆ ಗೊತ್ತಾಯಿತು ಅದೇನೆಂದು. ಅದೊಂದು ಹಳೆಯ ಮೆಟಡೋರ್ ವಾಹನ. ಅದರ ಮೇಲೆ ಅಲ್ಲಲ್ಲಿ ಸೀರಿಯಲ್ ದೀಪಗಳನ್ನು ಹಾಕಿದ್ದಾರೆ. ಕೆಲವು ಉರಿಯುತ್ತಿವೆ, ಕೆಲವು ಇಲ್ಲ... ಅದಕ್ಕೇ ವಿಚಿತ್ರವಾಗಿ ಕಾಣುತ್ತಿದೆ. ಸಾಲದ್ದಕ್ಕೆ ಒಂದೇ ಹೆಡ್‌ಲೈಟ್ ಬೇರೆ. ಆ ವಾಹನದ ಮೇಲೆ ಏನೋ ಬರೆದಿದ್ದಾರೆ. ಹಿಂದಿಯಲ್ಲಿ... ಅಸ್ಪಷ್ಟ.

'ಅದು ಯಾವುದೋ ಮದುವೆ ಪಾರ್ಟಿ ಇರಬೇಕು. ಸಂತೋಷದಿಂದ ಹಾಡು ಹಾಕಿಕೊಂಡು ಹೋಗುತ್ತಿರಬೇಕು.' ಅಂದುಕೊಂಡ ರವಿ. ಆ ವಾಹನ ನಿಧಾನವಾಗಿ ಬಂದು ರವಿಯ ಮುಂದೆ ನಿಂತಿತು. ಅದರಿಂದ ಒಬ್ಬ ವಯಸ್ಸಾದವ ಬಾಗಿಲು ತೆರೆದು ಹೊರಬಂದ. ಸುಮಾರು ಎಪ್ಪತ್ತರ ವಯಸ್ಸು. ಹಣೆಯಲ್ಲಿ ಎದ್ದು ಕಾಣುವಂತೆ ಕೆಂಪು ತಿಲಕ. ತಲೆಗೆ ಒಂದು ಕೆಂಪುಬಣ್ಣದ ವಸ್ತ್ರದ ಪೇಟ.

"ಏನು ಇಲ್ಲಿದ್ದೀರಿ? ಎಲ್ಲಿಗೆ ಹೋಗಬೇಕು?" ಆ ಕೊಂಚವೇ ತೆರೆದ ಬಾಗಿಲಿನಿಂದ ಒಳಗಡೆ ಯಾರಿದ್ದಾರೆ ಎಂಬ ಕುತೂಹಲದಿಂದ ಇಣುಕಿದ ರವಿ. ಅಲ್ಲಿ ಅವನಿಗೆ ಅತಿಶಯ ಸುಂದರಿಯೊಬ್ಬಳು ಮದುವಣಗಿತ್ತಿಯ ದಿರಿಸಿನಲ್ಲಿ ಕಂಡಳು. ಅವಳ ಪಕ್ಕದಲ್ಲಿ ಒಂದು ಚಿಕ್ಕಮಗು ಮಲಗಿತ್ತು. ಕಿಟಕಿಯ ಬಳಿಯ ಸೀಟಿನಲ್ಲಿ ಒಂದಿಬ್ಬರು ಆ ಮುದುಕನ ರೀತಿಯೇ ಪೇಟಾ ಕಟ್ಟಿಕೊಂಡು ಕುಳಿತಿದ್ದು, ಎಲ್ಲರೂ ಅವನನ್ನೇ ನೋಡುತ್ತಿದ್ದರು. ರವಿಯ ಜೊತೆಗಿದ್ದ ವ್ಯಕ್ತಿ ಹಿಂದಿನಿಂದ ಬಂದು "ನಮಗೆ ಆ ಮುಂದಿನ ಗ್ರಾಮ ಮಾಳ್ಯಾದಲ್ಲಿ ಇಳಿಸುತ್ತಿರಾ?" ಎಂದ.

"ಬನ್ನಿ ಬನ್ನಿ, ಈ ಕತ್ತಲಲ್ಲಿ ಹೇಗೆ ಹೋಗುತ್ತಿರಿ? ಮಳೆ ಬೇರೆ ಬರುವ ಹಾಗಿದೆ" ಮುದುಕ ಪೂರ್ತಿ ಬಾಗಿಲನ್ನು ತೆರೆದು ಪಕ್ಕಕ್ಕೆ ಸರಿದ. ಆ ವ್ಯಕ್ತಿ ರವಿಗೆ ಕೈ ಹಿಡಿದುಕೊಂಡು ಹತ್ತಲು ಸಹಾಯ ಮಾಡಿದ. ಮೆಟ್ಟಿಲುಗಳ ಮೇಲೆ ಕಾಲಿಡುವ ವೇಳೆಗೆ ಆ ಹುಡುಗಿ ಕಣ್ಣು ಬಿಟ್ಟಳು. 'ವಾವ್! ಅದೇನು ಆಕರ್ಷಕ ಕಣ್ಣುಗಳು... ಇವಳನ್ನು ಮದುವೆ ಆಗುವವನು ನಿಜಕ್ಕೂ ಅದೃಷ್ಟವಂತ' ಎಂದುಕೊಂಡು ಮೆಟ್ಟಿಲೇರಿದ. "ನೀನೆ ಆಗುತ್ತಿಯಾ ಬೇಟಾ?" ನಿಧಾನವಾಗಿ ಆ ಮುದುಕ ಕೇಳಿದ. ಒಂದು ಕ್ಷಣ ರವಿ ಗಾಬರಿಯಾದ.

'ಈ ಮುದುಕ ಏನಂದ? ಯಾಕೆ ಹಾಗಂದ? ನನ್ನ ಮನಸ್ಸಿನಲ್ಲಿ ಅಂದುಕೊಂಡಿದ್ದು ಇವನಿಗೆ ಹೇಗೆ ಗೊತ್ತಾಯಿತು?' ಅಂದುಕೊಳ್ಳುತ್ತಾ ಒಳಗಡಿಇಟ್ಟ. ಬಾಗಿಲಲ್ಲಿ ನಿಂತಿದ್ದ ಮುದುಕ ಧಡಾರನೆ ಬಾಗಿಲು ಹಾಕಿದ. "ಅಯ್ಯೋ ಇನ್ನೊಬ್ಬರು ಇದ್ದಾರೆ..." ಕೂಗಿದ ರವಿ.

"ಎಲ್ಲಿದ್ದಾರೆ? ಹೊರಗಡೆ ಯಾರೂ ಇಲ್ಲ..." ಎನ್ನುತ್ತಾ ಮತ್ತೆ ಬಾಗಿಲು ತೆರೆದ ಆ ಮುದುಕ. ಆ